ಕಲ್ಪನೆಗಳು ಬಹಳ ಅಸ್ಪಷ್ಟವಾಗಿ ಆರಂಭವಾಗುತ್ತವೆ. ನಿಮ್ಮ ತಲೆಯೊಳಗೊಂದು ಕಪ್ಪುಮೋಡ ತೇಲುತ್ತಿರುತ್ತದೆ. ಅದರಿಂದ ಏನು ಹೊರಬರಬಹುದು ಎಂದು ನೀವು ಅಚ್ಚರಿ ಪಡುತ್ತಿರುವಾಗ ಅದು ತಂತಾನೆ ಕರಗುತ್ತದೆ. ಹಾಗೆ ಕರಗಿದಾಗ ಚಿತ್ರಗಳಲ್ಲ, ಆಲೋಚನೆಗಳು ಕಾಣುತ್ತವೆ. ಅಸ್ಪಷ್ಟವಾಗಿ ಪದಗಳ ಮೂಲಕ ಯೋಚಿಸಲಾರಂಭಿಸುವಿರಿ. ಆಗ ಪದಗಳು ತಾನೇ ತಾನಾಗಿ ಚಿತ್ರಗಳಾಗುತ್ತವೆ. ಕತೆ ಬರೆಯುವ ಹೊತ್ತಿಗೆ ನನ್ನ ಪಾತ್ರಗಳು ಜೀವಂತವಾಗಿ ನನ್ನ ಸುತ್ತಮುತ್ತ ಓಡಾಡಲು ಶುರುಮಾಡಿರುತ್ತವೆ. ತಮ್ಮಷ್ಟಕ್ಕೆ ತಾವೇ ಕೆಲಸಗಳನ್ನು ಮಾಡಲಾರಂಭಿಸುತ್ತವೆ. ನೀವೀಗ ನನ್ನೆದುರಿಗೆ ಕೂತಷ್ಟೇ ಸ್ವತಂತ್ರವಾಗಿ ಅವರು ನನ್ನ ತಲೆಯಲ್ಲಿರುತ್ತಾರೆ.

◆ ಕತೆ ತನ್ನ ರಾಚನಿಕ ಸ್ವರೂಪವನ್ನು ಪಡೆದುಕೊಳ್ಳುವಾಗ ಎದುರಾಗುವ ತಾಂತ್ರಿಕ ಸಮಸ್ಯೆಗಳು ಯಾವ ರೀತಿಯದು? ತಂತ್ರವನ್ನು ಉದ್ದೇಶಪೂರ್ವಕವಾಗಿ ಬಳಸುವಿರಾ? ಉದಾಹರಣೆಗೆ 'Flowering Judas'ನಲ್ಲಿ ಇತಿಹಾಸವನ್ನು ಚಾರಿತ್ರಿಕ ವರ್ತಮಾನ ಅನ್ನುವ ರೀತಿ ಬಳಸಿರುವುದರ ಬಗ್ಗೆ.

ಮೊದಲ ಸಲ ಯಾರೋ "ಯಾಕೆ ನೀವು 'Flowering Judas'ವನ್ನು ಚಾರಿತ್ರಿಕ ವರ್ತಮಾನ ಎನ್ನುವ ರೀತಿ ಬರೆದಿರಿ?" ಅಂತ ಕೇಳಿದರು. ಕ್ಷಣಕಾಲ ಯೋಚಿಸಿ "ಹೌದೇ?" ಎಂದೆ. ನಾನದನ್ನು ಹಾಗೆ ಬರೆಯಬೇಕೆಂದು ಯೋಜಿಸಿರಲಿಲ್ಲ. ಟೈಪ್‌ರೈಟರ್ ಮುಂದೆ ಕೂತರೆ ಸಾಕು, ಕತೆಗಳು ತಂತಾನೆ ಬರೆಸಿಕೊಳ್ಳುತ್ತವೆ. ನಾನೆಂದೂ ರಚನಾ ಸ್ವರೂಪದ ಬಗ್ಗೆ ಯೋಚಿಸುವುದಿಲ್ಲ. ನಿಜ ಹೇಳಬೇಕೆಂದರೆ ಬರವಣಿಗೆ ಕಲಿತ ಮೇಲೆ ಇಂಥದ್ದರ ಬಗ್ಗೆ ನನಗೆ ಆಸಕ್ತಿಯಿಲ್ಲ. ತಂತ್ರವನ್ನು, ಕಲೆಯನ್ನು ಕಲಿಯಬೇಕು. ಮೊದಲು ಅದನ್ನು ಕಲಿತೆ. ಈಗ ನನಗೆ ಕತೆ ಹೇಳುವುದರಲ್ಲಿ ಮಾತ್ರ ಆಸಕ್ತಿ. ಸಾಧ್ಯವಾದಷ್ಟು ಸ್ಪಷ್ಟವಾಗಿ, ಸರಳವಾಗಿ ಹೇಳಲು ಪ್ರಯತ್ನಿಸುತ್ತೇನೆ.

◆ ಕಲಿಕೆಯ ಆ ದಿನಗಳಲ್ಲಿ ನೀವು ಯಾರನ್ನು ನೋಡಿ ಕಲಿತಿರಿ?

ಲೇಖಕಿಯಾಗಿ ನನ್ನನ್ನು ಬಹುವಾಗಿ ಪ್ರಭಾವಿಸಿದ್ದು ಲಾರೆನ್ಸ್ ಸ್ಟರ್ನ (ಐರಿಷ್ ಕಾದಂಬರಿಕಾರ)ನ 'Tristram Shandy'. ನಾನು ಆತನಂತೆ ಬರೆಯುವುದಿಲ್ಲ. ಆತನ ಬರವಣಿಗೆಯ ಶೈಲಿ ನನಗೆ ಬಹಳ ಇಷ್ಟ. ಬಹಳ ಸರಳವಾಗಿ ಬರೆಯುತ್ತಾನೆ. ಇನ್ನಿತರ ದೊಡ್ಡ ಬರಹಗಾರರ ಭವ್ಯವಾದ ಬರವಣಿಗೆ ನೋಡಿ ಹೆದರಿದ್ದೆ. ಆದರೆ, ಲಾರೆನ್ಸ್ ಸ್ಟರ್ನ್ "ಏ ಇದು ಬಹಳ ಸುಲಭ. ಈ ರೀತಿ ಪ್ರಯತ್ನಿಸು" ಎಂದು ಹೇಳಿದಂತೆ ಅನ್ನಿಸಿತು. ಅದೇ ರೀತಿ ಪ್ರಯತ್ನಿಸಿದೆ. ಅದು ಬೇರೆಯವರು ಕಲಿಸಿದ್ದಕ್ಕಿಂತ ಹೆಚ್ಚಿನದನ್ನು ಕಲಿಸಿತು. ಏಕೆಂದರೆ, ಲಾರೆನ್ಸ್ ಸ್ಟರ್ನ್ ಬಹಳ ಸಂಕೀರ್ಣ ಹಾಗೂ ಸೂಕ್ಷ್ಮ ವ್ಯಕ್ತಿ.

◆ ನಿಮ್ಮ ವಾರಗೆಯವರಲ್ಲಿ ಯಾರಾದರೂ ನೀವು ಲೇಖಕಿಯಾಗಲು ಮಹತ್ವದ ಕೊಡುಗೆ ನೀಡಿದ್ದಾರೆಯೇ?

ನನ್ನ ವಾರಗೆಯವರಿಂದ ಹೆಚ್ಚಿನದೇನನ್ನೂ ಕಲಿಯಲಿಲ್ಲ. ನಾವೆಲ್ಲ ನಮ್ಮದೇ ತರ್ಕಗಳಿಗೆ ಬದ್ಧರಾಗಿದ್ದೆವು. ಒಬ್ಬರು ಮತ್ತೊಬ್ಬರ ತರ್ಕಕ್ಕೆ ಬಾಗುತ್ತಿರಲಿಲ್ಲ. ನಮ್ಮ ನಡುವೆ ಸ್ನೇಹವಿತ್ತು, ಸಹಕಾರವಿತ್ತು, ಅಷ್ಟೇ. ನಾನು ಬರೆದದ್ದನ್ನು ಯಾರಿಗೂ ತೋರಿಸಬೇಕು ಅಂತ ನನಗನ್ನಿಸಿರಲಿಲ್ಲ. ಮೊದಮೊದಲು ಪ್ರಕಟಿಸಲು ಕೂಡ ಮುಂದಾಗಿರಲಿಲ್ಲ. ಮೊದಲ ಕತೆಯನ್ನು 1923ರಲ್ಲಿ ಪ್ರಕಟಿಸಿದೆ. "Maria Concepcion" ಮೊದಲ ಪ್ರಕಟಿತ ಕತೆ. ಅದನ್ನು ಹದಿನೈದೋ ಹದಿನಾರೋ